



# ಅಂತರಂಗ ವಿಕಾಸದ ಮಾಧ್ಯಮವಾಗಿ ಕಲೆ

**ಕೆರೆಮನೆ ಶಿವಾನಂದ ಹೆಗಡೆ**
ಯಕ್ಷಗಾನ ಕಲಾವಿದರು

ಕಳೆದ ಐವತ್ತು ವರ್ಷಗಳಲ್ಲಿ ಕರ್ನಾಟಕದ ಕಲಾವಿಭಾಗದಲ್ಲಿ ಅನೇಕ ಸ್ಥಿತ್ಯಂತರಗಳಾಗಿವೆ. ಪರಸ್ಪರ ಕಲಾಪ್ರಕಾರಗಳ ನಡುವೆ ಮುಕ್ತವಾದ ಕೊಡುಕೊಳ್ಳುವಿಕೆ ಒಂದು ಬಗೆಯದ್ದಾದರೆ, ತಂತ್ರಜ್ಞಾನದ ಬೆಂಬಲ ಮತ್ತೊಂದು ಬಗೆಯದ್ದು.

ಒಂದು ಕಾಲದಲ್ಲಿ ಸಮಾಜದಿಂದ ಅತ್ಯಂತ ನಿಕೃಷ್ಟವಾದ, ಮಾನ ಮನ್ನಣೆಯಿಂದ ವಂಚಿತವಾದ ಹಂತ ತಲುಪಿದ್ದ ಕಲಾಕ್ಷೇತ್ರವು ಕಾಲಕ್ರಮೇಣ ಸಮಾಜದ ಪ್ರತಿಷ್ಠಿತ ಸಂಗಾತಿಯಾಗಿ ಬದಲಾಗಿದೆ. ಪ್ರದರ್ಶನ ಕ್ಷೇತ್ರವು ಆಯಾ ಊರುಗಳಿಗೆ ಸೀಮಿತವಾಗಿರದೇ ವಿಸ್ತಾರವಾಗಿದೆ. ಈ ಕ್ಷೇತ್ರಕ್ಕೆ ವಿಪುಲ ಪ್ರೋತ್ಸಾಹ ದೊರೆಯಲು ಆರಂಭವಾದಂತೆಯೇ, ಸಂಶೋಧನೆ ನಡೆಸಲು, ಗಂಭೀರವಾಗಿ ಕಲಾಮಾಧ್ಯಮದಲ್ಲಿ ತೊಡಗಿಸಿಕೊಳ್ಳಲು ಹೊಸ ತಲೆಮಾರಿನ ಯುವಜನತೆ ಮುಂದೆ ಬಂದರು. ಅದರ ಪರಿಣಾಮವೆಂಬಂತೆ ನೃತ್ಯ, ಸಂಗೀತ ಮತ್ತು ಪ್ರದರ್ಶನ ಕಲೆಗಳ ಕ್ಷೇತ್ರದಲ್ಲಿ ಹೊಸ ಹೊಸ ಪ್ರಯೋಗಗಳು ಕಲಾಪ್ರಸ್ತುತಿಗಳ ಸಂಖ್ಯೆಯನ್ನು ಹೆಚ್ಚಿಸಿತು.



ಕಲೆಯು ಭೌತಿಕ ಬದುಕಿಗಾಗಿ ಮಾತ್ರವಲ್ಲ, ಅಂತರಂಗದ ವಿಕಾಸದ ಕಾರಣಕ್ಕಾಗಿಯೂ ಬೇಕು ಎಂಬ ಭಾವನೆಯು ಬಹುತೇಕ ಸಮಾಜದ ಎಲ್ಲಾ ವರ್ಗಗಳಲ್ಲೂ ಜನಪ್ರಿಯವಾಗಿದ್ದನ್ನು ಕಾಣಬಹುದು. ಅದು ಜೀವನದ ಬಹುದೊಡ್ಡ ಸಾಧನೆಯ ಮಾಧ್ಯಮವಾಗಿ ಕೂಡ ಗುರುತು ಪಡೆಯಿತು. ಹಾಗಾಗಿ ಅದು ಕೇವಲ ಮನರಂಜನೆಗಷ್ಟೇ ಅಲ್ಲದೆ, ನಮ್ಮ ಸಂಸ್ಕೃತಿಯ ಒಂದು ಕೈಗನ್ನಡಿ ಎನ್ನುವ ಮನಸ್ಥಿತಿ ನಿರ್ಮಾಣವಾಗಿದೆ. ಅಥವಾ ಕಲೆಯ ಮೂಲಕವೇ ಇಡೀ ಸಮಾಜ ತನ್ನನ್ನು ತಾನು ಪುನರ್ ನಿರ್ಮಿಸಿಕೊಳ್ಳುವುದಕ್ಕೆ ಸಾಧ್ಯ ಎನ್ನುವ ಧೋರಣೆಯನ್ನು ಕೂಡ ಈ ವಿಭಾಗದಲ್ಲಿ ತೊಡಗಿಸಿಕೊಂಡವರು ಒಪ್ಪಿಕೊಳ್ಳುತ್ತಿರುವುದು ಒಂದು ಬಹುದೊಡ್ಡ ಬದಲಾವಣೆಯೇ ಆಗಿದೆ.

ಕಲೆ ಮತ್ತು ಕಲಾವಿದರನ್ನು ಅಸ್ಪೃಶ್ಯರಂತೆ ಕಂಡ ಕಾಲ ಇಂದು ಇತಿಹಾಸ. ಬಹುತೇಕ ಸರ್ಕಾರಗಳು, ಧಾರ್ಮಿಕ ಕೇಂದ್ರಗಳು, ಸಾಮಾಜಿಕ ಸಂಸ್ಥೆಗಳು, ಶೈಕ್ಷಣಿಕ ಸಂಸ್ಥೆಗಳು, ಹೀಗೆ ಸಮಾಜದ ಎಲ್ಲಾ ವರ್ಗದವರಿಂದ ಗೌರವ ಪಡೆಯುತ್ತಿದೆ. ಯಕ್ಷಗಾನ ಕ್ಷೇತ್ರದಲ್ಲಿ ಶಿವರಾಮ ಕಾರಂತರು ಮಾಡಿದ ಅನುಸಂಧಾನಗಳು ಇಡೀ ಕಲಾಕ್ಷೇತ್ರದ ಮೇಲೆಯೇ ಬಹುದೊಡ್ಡ ಪ್ರಭಾವ ಬೀರಿತು. ಸೃಜನಶೀಲತೆಯ ಅನಾವರಣಕ್ಕೆ ಅವರೊಂದು ರಹದಾರಿಯನ್ನು ನಿರ್ಮಿಸಿದರು. ವಿದೇಶದಿಂದ ಬಂದ ಹಲವರು ಯಕ್ಷಗಾನದ ಕುರಿತು ಪುಸ್ತಕಗಳನ್ನು ಬರೆದಿದ್ದಾರೆ, ಸಂಶೋಧನೆಗಳನ್ನು ನಡೆಸಿದ್ದಾರೆ. ಇಂದು ಯಕ್ಷಗಾನ ಅಂತರಾಷ್ಟ್ರೀಯ ಮನ್ನಣೆಯನ್ನು ಪಡೆಯುತ್ತಿದೆ. ಬಿ.ವಿ. ಕಾರಂತ, ಕಮಲಾದೇವಿ ಚಟ್ಟೋಪಾಧ್ಯಾಯ, ಗುರು ಮಾಯಾ ರಾವ್, ಗುಬ್ಬಿ ವೀರಣ್ಣ, ಶ್ರೀರಂಗ – ಹೀಗೆ ಸಾಂಸ್ಕೃತಿಕ ರಂಗದ ನವೀನ ಪ್ರಯೋಗ ಪ್ರಜ್ಞಾ ವಿಸ್ತರಣೆಗೆ ಕೆಲಸ ಮಾಡಿದವರು ಅನೇಕರು.

ಒಂದು ಕಾಲದಲ್ಲಿ ತಾಂತ್ರಿಕ ಶಿಕ್ಷಣ ಕಲಿಕೆ ಮಾತ್ರ ಸಮಾಜದ ಬಹುಮುಖ್ಯ ಅಂಗವಾಗಿತ್ತು. ಆದರೆ ನಂತರದಲ್ಲಿ ಕಲಾಕ್ಷೇತ್ರವು ಕೂಡ ಆ ಸ್ಥಾನವನ್ನು ಪಡೆಯಲಾರಂಭಿಸಿದೆ. 90ರ ದಶಕದಲ್ಲಿ ಆರಂಭವಾದ ತಂತ್ರಜ್ಞಾನದ ಆವಿಷ್ಕಾರಗಳು ಕಲಾಕ್ಷೇತ್ರದ ವಿಕಾಸಕ್ಕೆ ಬಹುದೊಡ್ಡ ಕೊಡುಗೆಯನ್ನು ನೀಡಿವೆ. ಅದರ ಪರಿಣಾಮವೆಂದರೆ, ಸಮುದಾಯಗಳಿಗೆ ಸೀಮಿತವಾಗಿದ್ದ ಕಲಾಪ್ರಕಾರಗಳು ತಮ್ಮ ಸೀಮೆಯನ್ನು ಮೀರಿ ಎಲ್ಲರಿಗೂ ಸಲ್ಲುವ ಪ್ರಕಾರಗಳಾಗಿ ಬೆಳೆದು ನಿಂತವು. ಜೀವನಕ್ಕೆ ಕಲೆ, ಸಂಸ್ಕೃತಿಗಳು ಅನಿವಾರ್ಯ ಎನ್ನುವ ಪ್ರಜ್ಞೆ ಇಂದಿನ ಒಟ್ಟು ಸಮಾಜದ ಚಿಂತನೆಯ ಬಹು ಮುಖ್ಯ ಅಂಶವಾಗಿದ್ದನ್ನು ನೋಡಬಹುದು. ಈ ಎರಡೂ ಬದಲಾವಣೆಗಳು 50 ವರ್ಷಗಳಲ್ಲಿ ಸಾಗಿ ಬಂದ ಕನ್ನಡ ನಾಡಿನ ಚರಿತ್ರೆಯ ಒಂದು ಉತ್ತಮ ಬೆಳವಣಿಗೆಯಾಗಿದೆ. ವಿಕಾಸದ ಹಂತದಲ್ಲಿ ಔನ್ನತ್ಯದ ಜೊತೆಗೆ ಅವನತಿ ಕೂಡಾ ಇರುತ್ತದೆ. ನಾಡಿನ ಕಲೆಗಳು ಪ್ರಗತಿ ಜೊತೆಗೆ ವಿಗತಿ ಎರಡನ್ನು ತೂಗಿಸಿಕೊಂಡು ಸಾಗುತ್ತಿವೆ. ಆದರೆ ಕಲೆ ಸಮಾಜದಲ್ಲಿ ಒಂದು ಬದಲಾವಣೆಯನ್ನು ತರಬಹುದು ಎನ್ನುವಂಥ ವಿಶ್ವಾಸಕ್ಕೆ ಕುಂದಾಗಿಲ್ಲ.

ಕನ್ನಡದ ಅನೇಕ ಗ್ರಾಮೀಣ ಪ್ರದೇಶದ ಕಲೆಗಳು ಇಂದು ಮುನ್ನೆಲೆಯಲ್ಲಿ ಕಾಣಿಸಿಕೊಳ್ಳುತ್ತಿವೆ. ಜೊತೆಗೆ ಕಲೆ ಮನರಂಜನೆಯ ಸಂಕುಚಿತ ಅರ್ಥದಿಂದ ವಿಕಾಸಗೊಂಡು ನಮ್ಮ ಜನಪದದ ಬೌದ್ಧಿಕ ಸಂಪತ್ತು ಎಂಬ ಗ್ರಹಿಕೆಯನ್ನು ಶಿಕ್ಷಿತ ವರ್ಗ ಒಪ್ಪಿಕೊಂಡಿದ್ದು, ಬೌದ್ಧಿಕ ಸಂಪತ್ತಿನ ವಿಸ್ತಾರಕ್ಕೆ ಸಾಮಗ್ರಿಗಳನ್ನು ಒದಗಿಸುತ್ತಿದೆ. ಮನೋರಂಜನೆಯಿಂದ ಮನೋವಿಕಾಸಕ್ಕೆ, ಮನೋವಿಕಾಸದಿಂದ ಸಮಗ್ರ ಮಾನವೀಯ ಮೌಲ್ಯಗಳನ್ನು ಜಾಗೃತಿಗೊಳಿಸುವತ್ತ ಕಲೆ ಸಂವೇದನಾಶೀಲವಾಗಿ ಬೆಳೆದಿದೆ. ■





ಸಾಂಸ್ಕೃತಿಕ ಅಸ್ಮಿತೆಯನ್ನೂ ಪ್ರಭಾವಿಸಿವೆ. ಈಗ 50 ವರ್ಷಗಳ ಹಿಂದಿನ ದಾರಿಯನ್ನು ನಿಂತು ನೋಡಿದಾಗ ಇದರಲ್ಲಿ 'ಬೂಸಾ' ಮತ್ತು 'ಸತ್ವ'ಭರಿತ ನಡೆಗಳು ಎಷ್ಟು? ಯಾವುವು? ಎಂಬುದನ್ನು ನಿಷ್ಠೂರವಾಗಿ ಮತ್ತು ಪ್ರಾಮಾಣಿಕವಾಗಿ ಗುರುತಿಸಿಕೊಂಡು ಮುನ್ನಡೆಯುವುದು ಮುಖ್ಯ.

ನನ್ನ ತಿಳುವಳಿಕೆಯ ಮಿತಿಯಲ್ಲಿ ಹೇಳುವುದಾದರೆ ಕಳೆದ ಹದಿನೈದು, ಇಪ್ಪತ್ತು ವರ್ಷಗಳಲ್ಲಿ ನಡೆದಿರುವ ಕೋಲಾರ ಬೆಟ್ಟದ 'ಆದಿಮ'ದ ನಡೆಗಳು, ಹೆಗ್ಗೋಡಿನ ಜನಮನದಾಟ ತಂಡದ ಊರುಕೇರಿ, ಬದುಕು ಬಯಲು, ಸತ್ಯಶೋಧಕ ನಾಟಕ ಪ್ರಯೋಗಗಳು, ಧಾರವಾಡದ 'ಆಟಮಾಟ' ತಂಡದ ಹೊಲೆಗೇರಿ ರಾಜಕುಮಾರ, ರಮಾಯಿ ಥರದ ಪ್ರಯೋಗಗಳು ಮತ್ತು ಮೊನ್ನೆ ಮೊನ್ನೆಯಷ್ಟೇ ಬೆಂಗಳೂರಿನ 'ಪಯಣ' ತಂಡಕ್ಕೆ 50 ವರ್ಷ ದಾಟದ ಟ್ರಾನ್ಸ್ ಸಮುದಾಯದವರು ಸೇರಿ ಕಟ್ಟಿದ 'ತಲ್ಲಿ' ರೀತಿಯ ಪ್ರಯೋಗಗಳು ಕನ್ನಡ ರಂಗಭೂಮಿಯ ಘನತೆಯನ್ನು, ಆ ಮೂಲಕ ಕರ್ನಾಟಕದ ಸಾಂಸ್ಕೃತಿಕ ಲೋಕದ ಘನತೆಯನ್ನು ಹಿಗ್ಗಿಸಿವೆ. ಇಲ್ಲಿಂದ ಮುಂದೆ ನಡೆಯುವುದಾದರೆ ಇನ್ನೂ ರಂಗವನ್ನೇ ಏರದ ಹಲವು ಬದುಕು, ಕಥನಗಳು ಮತ್ತು ರಂಗಭೂಮಿಗೆ ಈತನಕ 'ಮುಟ್ಟಿಸಿಕೊಳ್ಳಲು' ಸಾಧ್ಯವಾಗಿರದ ಜನರು, ಕಲಾವಿದರು, ಪ್ರೇಕ್ಷಕರು ನಮ್ಮ ನಡುವೆಯೇ ಇದ್ದಾರೆ, ಅಂತಹವುಗಳನ್ನು ಕನ್ನಡ ರಂಗಭೂಮಿ ಕಾಣಬೇಕಿದೆ. ಆ ಮೂಲಕದ ಐವತ್ತರ ಸಂಭ್ರಮದಲ್ಲಿರುವ ಕರ್ನಾಟಕಕ್ಕೆ ಕರುಣೆ ಮತ್ತು ಮೈತ್ರಿಯ ಲೋಕದೃಷ್ಟಿಯನ್ನು ಕಟ್ಟಿಕೊಡುವ ಜವಾಬ್ದಾರಿ ಕನ್ನಡ ರಂಗಭೂಮಿಗೆ ಎಂದು ನಾವು ಅರಿತುಕೊಳ್ಳಬೇಕಾಗಿದೆ. ■